ಗಳಿಂದಾಗಿ ಒಪ್ಪಲಾಗಲಿಲ್ಲ. ಆದಾಗ್ಯೂ ಅವರ ಇತರ ಬೇಡಿಕೆಗಳಾದ, ವರ್ಗಾವಣೆ ಮಾಡದಿರುವುದು ಕಿರುಕುಳ ಕೊಡುವುದು ಇವುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಇವರುಗಳ ಸೇವೆಯನ್ನು ಸಕ್ರಮಗೊಳಿಸುವುದರ ಬಗ್ಗೆ ಸರ್ಕಾರ ಯಾವ ಆಶ್ವಾಸನೆಯನ್ನೂ ನೀಡಿಲ್ಲ.

ಈ ನೌಕರರು ಮುಷ್ಕರ ಹೂಡಿದರೂ ಸಹ ಇವರು ನಿರ್ವಹಿಸುತ್ತಿರುವ ಕೆಲಸಕ್ಕೆ ಯಾವ ಅಡಚಣೆಯಾಗದೆಂದು ಭಾವಿಸಲಾಗಿದೆ.

(6) Regularisation of the services of local candidates working as temporary Lecturers.

SMT. MUKHTARUNNISA.—Sir, about 150 local candidates are working in various universities as temporary Lecturers since 10–15 years: Government have regularised the services of local candidates working in various departments *vide* G.O. No. DPAR 49 SLC 84 (1), Bangalore, dated 2nd July 1986. The Inter University Board under the chairmanship of Hon'ble Education Minister has resolved to confirm the services of local candidates working in various universities *vide* G.O. No.ED–1/UNI/86, dated 23rd September 1986. The Bangalore University has also regularised the services of local candidates vide G.O.No. EST/E3/Temp/Regin/31/1984–85, Bangalore dated 6–11–1986. The Mysore University in its Syndicate meeting held on 5th September 1986 has also passed a resolution requesting the Government to issue an ordinance amending the Universities Act for regularisation of the services of local candidates some of the Local condiates have been removed from service and some are on the list. Hence we urge the Government to intervene and issue directions to the concerned to reinstate the candidates already removed and not to remove the local candidates till the question is settled. We also urge the Government to issue an ordinance immediately and regularise the services of local candidates, so that justice is done equally to all the local candidates in Government services.

ಶ್ರೀ ಡಿ. ಮಂಜುನಾಥ್.—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಈ ಪ್ರಶ್ನೆ ಉದ್ಭವಿಸಿದೆ ಈಗ ಸರ್ಕಾರದಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡತಕ್ಕವರನ್ನು ಕನ್‌ಫರ್ಮ್ ಮಾಡಬೇಕೆಂದು ಮೇಲೆ ವಿಶ್ವವಿದ್ಯಾನಿಲಯದಲ್ಲಿಯೂ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಅಲ್ಲೇ ಪ್ರತ್ಯೇಕವಾಗಿ ಒಂದು ಆರ್ಡಿನೆನ್ಸ್ ಮಾಡಬೇಕಾಗಿದೆ, ಆ ಬಗ್ಗೆ ಈಗಾಗಲೇ ವೈಸ್ ಚಾನ್ಸಲರ್‌ಗೆ ನೀವೇ ಆದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿ ಎಂದು ಹೇಳಿದ್ದೇವೆ. ಇನ್ನೊಂದು ಸಾರಿ ಹೇಳಿ ಚರ್ಚೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ.

(೭) ಖಾಸಗೀ ಬಸ್ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ

ಶ್ರೀ ಬಸವರಾಜ ಹವಿಗಪ್ಪ ಪಾಟೀಲ್.—ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳ ರಾಷ್ಟ್ರೀಕರಣವಾಗಿ ಸುಮಾರು ಒಂಬೂಭರೆ ವರ್ಷ ಮೇಲಾಗಿದ್ದು ಸದರಿ ವಾಹನಗಳಲ್ಲಿ ಕೆಲಸ ಮಾಡುತ್ತಿದ್ದ. ಚಾಲಕ ಹಾಗೂ ನಿರ್ವಾಹಕ ಮತ್ತು ಇತರ ಸಿಬ್ಬಂದಿ ವರ್ಗದವರನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಇನ್ನೂ ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ. ಇದರಿಂದ ಅವರಿಗೆ ಬಹಳಷ್ಟು ತೊಂದರೆಯಾಗಿದೆ. ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೋ ಅಥವಾ ಇಲ್ಲವೋ ಎಂಬುದನ್ನು

ತಿಳಿಸಬೇಕು. ಸುಮ್ಮನೆ ಆಶ್ವಾಸನೆ ಕೊಟ್ಟುಕೊಂಡು ಬಂದಿರುವುದರಿಂದ ಅವರು ಇದೇ ಕೆಲಸವನ್ನೇ ನಂಬಿ ಕುಳಿತಿದ್ದಾರೆ. ಅವರೆಲ್ಲರೂ ತುಂಬಾ ಬಡವರು. ಈ ಬಡ ಜನರ ಬೇಡಿಕೆಯನ್ನು ಈಡೇರಿಸಿ ಅವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ.—ಈ ವಿಚಾರದ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಪ್ರಶ್ನೆ ಬಂದಿತ್ತು, ಈಗಲೇ ಉತ್ತರಿಸಿದ್ದೇನೆ. ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂಬ ಪ್ರಶ್ನೆ ಇಲ್ಲ. ಅವರನ್ನು ತೆಗೆದು ಕೊಳ್ಳಲಿಕ್ಕೆ ಕಾರ್ಪೊರೇಷನ್ನಿಗೆ ಏನು ಬಾಧಕ ಇದೆ ಎಂದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಅಂಡ್ ರೂಲ್ಸ್‌ನ್ನು ಅಮೆಂಡ್ ಮಾಡಬೇಕಾಗಿದೆ. ಅದಕ್ಕೆ ಸೂಚನೆ ಕೊಟ್ಟಿದ್ದೇವೆ, ಮಾಡುತ್ತಿದ್ದಾರೆ ಯಾರ್ಯಾರಿಗೆ ಎಲಿಜಿಬಿಲಿಟಿ ಬರುತ್ತದೆ ಆವರ ಅನುಕೂಲಕ್ಕೋಸ್ಕರ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಬೇಕೆಂದಿರುವುದು. ಉದಾಹರಣೆಗೆ ಒಬ್ಬ ಡ್ರೈವರ್ ಇರುತ್ತಾನೆ, ಅವನಿಗೆ ೫೦ ವರ್ಷ ಆಗಿರುತ್ತದೆ. ಅಂಥವರಿಗೆ ಮಾನವೀಯತೆಯ ದೃಷ್ಟಿಯಿಂದ ಕೆಲಸ ಕೊಡ ಬೇಕಾಗುತ್ತದೆ. ಅಂಥವರಿಗೆ ಅನುಕೂಲವಾಗಲಿ ಎಂದು ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ. ೨-೩ ತಿಂಗಳೊಳಗೆ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ಯಾರ್ಯಾರಿಗೆ ಎಲಿಜಿಬಿಲಿಟಿ ಇದೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಿಕ್ಕೆ ಸೂಚನೆ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

(೮) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಟೋರಿಕ್ಷಾ ಪರವಾನಿಗೆಯನ್ನು ನಿಲ್ಲಿಸಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಿಕ್ಷಾ ನಡೆಸಲು ಹೊಸ ಪರ್ಮಿಟ್ ಕೊಡುವುದನ್ನು ಸುಮಾರು ಒಂದು ವರ್ಷದಿಂದ ನಿಲ್ಲಿಸಲಾಗಿದೆ. ಇದರಿಂದಾಗಿ ಅನೇಕ ಮಂದಿ ಬಡ ನಿರುದ್ಯೋಗಿಗಳು, ಶಾಲೆಸೆ ಕೆಲಸ ಬಲ್ಲ ಪರಿಶಿಷ್ಟ ಜಾತಿ-ವರ್ಗಗಳ ಯುವಕರು ಬ್ಯಾಂಕ್ ಸಾಲ ಮಂಜೂರಾಗಿದ್ದರೂ ಸಹ ರಿಕ್ಷಾ ಪರ್ಮಿಟ್ ಸಿಗದೇ ತೊಂದರೆಗೀಡಾಗಿದ್ದಾರೆ. ಜಿಲ್ಲಾ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರನ್ನು ಈ ವಿಚಾರದಲ್ಲಿ ವಿಚಾರಿಸಿದಾಗ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೂಲಕ ಸರ್ವೆ ನಡೆಸಲಾಯಿತು. ಅಗತ್ಯತೆ-ಅರ್ಹತೆ ಉಂಟೆಂದು ಅನೇಕ ಕಡೆ ಕಂಡುಬಂದರೂ, ಈ ವಿಚಾರವನ್ನು ನಾವೇ ತಾರೀಖು ೧೩-೧೨-೮೬ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಎದುರು ಸಾರ್ವಜನಿಕ ಅಹವಾಲು ಕೇಳುವ ವೇಳೆಯಲ್ಲಿ ಹಾಜರಿದ್ದು ಒತ್ತಾಯಿಸಿದ್ದರೂ, ಸಂಬಂಧಪಟ್ಟವರು ಯಾವುದೇ ಬೆಲೆ ನೀಡಿಲ್ಲ. ಪರಿಣಾಮವಾಗಿ ಹಳೇ ರಿಕ್ಷಾ ಪರ್ಮಿಟ್‌ಗಳು ಕಾಳಸಂತೆಯಲ್ಲಿ ವಿಪರೀತ ಬೆಲೆಯಲ್ಲಿ ವರ್ಗಾವಣೆಯಾಗಲ್ಪಡುತ್ತಿವೆ ಎಂಬ ದೂರು ಕೇಳಿಬರುತ್ತಿದೆ. ಸರ್ಕಾರ ಇನ್ನಾದರೂ ಎಚ್ಚೆತ್ತು ಕಾಳಸಂತೆಗೆ ಕಡಿವಾಣ ಹಾಕಿ, ನಿರುದ್ಯೋಗಿಗಳಿಗೆ ಪರ್ಮಿಟ್ ನೀಡಿ, ಹೊಸ ಬದುಕು ಬಾಳಲು ಪ್ರೋತ್ಸಾಹಿಸುವುದೇ, ಪ್ರಯಾಣಿಕರಿಗೆ ಜಿಲ್ಲೆಯ ಎಲ್ಲೆಡೆ ಬೇಕಾದ ಸೌಲಭ್ಯ ಕಲ್ಪಿಸಲು ನೆರವಾಗುವುದೇ ಎಂದು ತಿಳಿಯಬಯಸುತ್ತೇನೆ.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಸಾರಿಗೆ ಸಚಿವರು).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಿರುವುದಕ್ಕಿಂತ ಹೆಚ್ಚಿಗೆ ಹೊಸ ಆಟೋರಿಕ್ಷಾ ಪರಮಿಟ್‌ಗಳನ್ನು ಕೊಡುವುದನ್ನು ದಿನಾಂಕ ೨೧-೮-೧೯೮೫ ರಿಂದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ನಿಲ್ಲಿಸಿರುತ್ತೆ. ಆದಾಗ್ಯೂ ದಿನಾಂಕ ೧೧-೭-೧೯೮೬ ರಂದು ಬೆಳ್ತಂಗಡಿ ತಾಲ್ಲೂಕು ಪೂಂಜಲುಕಟ್ಟೆಗೆ ೧೦ ಹೊಸ ಆಟೋರಿಕ್ಷಾ ಪರಮಿಟ್ ಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕೊಟ್ಟಿರುತ್ತದೆ. ದಕ್ಷಿಣ ಕನ್ನಡದ ನಗರ ಮತ್ತು ಪಟ್ಟಣಗಳ ಪ್ರದೇಶಗಳಲ್ಲಿ ಜನಸಂಖ್ಯೆಯನ್ನು ಅನುಸರಿಸಿ ಹಾಗೂ ಟ್ಯಾಕ್ಸಿ ಮತ್ತು ಇತರೆ ವಾಹನ ಸೌಕರ್ಯಗಳನ್ನು ಅನುಸರಿಸಿ ಆಟೋರಿಕ್ಷಾ ಸಂಖ್ಯೆಯನ್ನು ದಕ್ಷಿಣ ಕನ್ನಡದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಈ ಕೆಳಕಂಡಂತೆ ನಿಗದಿಪಡಿಸಿರುತ್ತದೆ.

ಉಡುಪಿ	:	೧೩೨೩
ಕಾರ್ಕಳ	:	೩೩೭
ಕುಂದಾಪುರ	:	೩೦೦
ಮಂಗಳೂರು	:	೧೩೫೦
ಪುತ್ತೂರು	:	೪೯೧
ಬೆಳ್ತಂಗಡಿ	:	೨೭೦
ಸುಳ್ಯ	:	೧೪೪